<u>ದಿನಾಂಕ **04-01-2022** ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.</u>

ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ಶ್ರೀ ಎ.ಎ.ಡಿ ವಕೀಲರಿಂದ:

1. ಸರ್ವೆ ನಂಃ 35/1 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಗಳ ದೃಡಿಕೃತ ನಕಲುಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-5 ರಿಂದ ನಿಪಿ-8 ಎಂದು ಗುರುತಿಸಲಾಯಿತು. ಸದರಿ ದಾಖಲೆಗಳ ಭಾಷಾಂತರ ಮಾಡಿದ ದಾಖಲೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-5(ಎ) ದಿಂದ ನಿಪಿ-8(ಎ) ಎಂದು ಗರುತಿಸಲಾಯಿತು.

2. ಸರ್ವೆ ನಂಃ 35/1/2 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ಸದರಿ ದಾಖಲೆಯ ಭಾಷಾಂತರ ಮಾಡಿದ ದಾಖಲೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಪ್ರತಿವಾದಿ-4 ಮತ್ತು 5 ಪರ ವಕೀಲರು ದಾಖಲೆಯಲ್ಲಿ ರಾಜಿ ಪತ್ರವನ್ನು ಗುರುತಿಸಲು ತಕರಾರು ತೆಗೆದಿದ್ದು ಅವರ ಹೇಳಿಕೆ ಪ್ರಕಾರ ಸದರೀ ಲ್ಯಾಮಿನೆಷನ ಆಗಿದ್ದು ಒಂದು ವೇಳೆ ಎಫಎಸಎಲಗೆ ಕಳುಹಿಸಬೇಕಾದಲ್ಲಿ ಅದರಲ್ಲಿರುವ ಸಹಿಗಳನ್ನು ಗುರುತಿಸುವುದಾಗುವುದಿಲ್ಲ ಮತ್ತು ಸದರೀ ದಾಖಲೆಗಳ ಮುಖಾಂತರ ಆಸ್ತಿ ಬದಲಾವಣೆಯಾಗಿದ್ದು ಕಾನೂನಿನಡಿಯಲ್ಲಿ ಸದರಿ ದಾಖಲೆ ನೋಂದಣಿಯಾಗಬೇಕೆಂದು ಹೇಳಿದ್ದು ಅದಕ್ಕೆ ಪ್ರತ್ಯುತ್ತರವಾಗಿ ವಾದಿ ಪರ ವಕೀಲರು ಸದರೀ ದಾಖಲೆಯನ್ನು ಓದಿ ಹೇಳಿ ಸದರೀ ದಾಖಲೆಯ ಮುಖಾಂತರ ಕೇವಲ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ಮಾತ್ರ ಆಗಿದ್ದು ನೋಂದಣಿ ಮಾಡುವ ಅವಶ್ಯಕತೆಯಿರುವುದಿಲ್ಲವೆಂದು ಹೇಳಿರುತ್ತಾರೆ.

ಎರಡು ವಾದಗಳನ್ನು ಮತ್ತು ದಾಖಲೆಯನ್ನು ಪರಿಶೀಲಿಸಿ ನೋಡಲಾಗಿ ಸದರೀ ದಾಖಲೆಯ ಮುಖಾಂತರ ಯಾವುದೇ ಆಸ್ತಿ ಬದಲಾವಣೆಯಾಗಿರುವುದಿಲ್ಲ, ಕೇವಲ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಬದಲಾವಣೆ ಮಾಡಿ ಸದರಿ ದಾಖಲೆಗೆ ಇರುವ ಪಕ್ಷಗಾರರ ಸಮಕ್ಷಮ ಅದನ್ನು ಬರೆದಿರುವುದಾಗಿ ನಮೂದು ಇದ್ದ ಕಾರಣ ಸದರೀ ದಾಖಲೆ ನೋಂದಣಿ ಅವಶ್ಯಕತೆಯಿರುವುದಿಲ್ಲವೆಂದು ಹೇಳಿ ಪ್ರತಿವಾದಿ-4 ಮತ್ತು 5ರ ಹೇಳಿಕೆಯ ತಕರಾರನ್ನು ತಳ್ಳಿ ಹಾಕಲಾಯಿತು.

ಸದರೀ ದಾಖಲೆಯನ್ನು ನಿಪಿ-10 ಎಂದು ಮತ್ತು ಭಾಷಾಂತರಿಸಿದ ಪ್ರತಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ನಿಪಿ-10 ಭಾಷಾಂತರಿಸಿದ ಬಗ್ಗೆ ವಕೀಲರು ನೀಡಿರುವ ಪ್ರವಾಣಪತ್ರವನ್ನು ನಿಪಿ 11 ಎಂದು ಗುರುತಿಸಲಯಿತು.

ಪಾಟಿ ಸವಾಲು ಕೋರಿಕೆಯ ಮೇರೆಗೆ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**(ಓ.ಹೇ.ಕೇ.ಸ.ಇದೆ)**

ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಬಸವಕಲ್ಯಾಣ

ಸಾಕ್ಷಿದಾರರ ಸಹಿ